# ಗೋದ್ರೆಜ್ ಆಲ್ಪೈನ್ ವಸತಿ ಸಮುಚ್ಚಯಕ್ಕೆ ಚಾಲನೆ



ಮಂಗಳೂರು: ಮುಂಬಯಿ ಮೂಲದ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಅಭಿವೃದ್ಧಿ ಸಂಸ್ಥೆ ಗೋದ್ರೆಜ್ ಪ್ರಾಪರ್ಟೀಸ್‌ನಿಂದ ಗೋದ್ರೆಜ್ ಆಲ್ಪೈನ್ ಎಂಬ ಪ್ರೀಮಿಯಂ ವಸತಿ ಸಮುಚ್ಚಯಕ್ಕೆ ಯೆಯ್ಯಾಡಿಯ ಏರ್‌ಪೋರ್ಟ್ ರಸ್ತೆಯಲ್ಲಿ ಮಂಗಳವಾರ ಚಾಲನೆ ನೀಡಲಾಯಿತು.

ಗೋದ್ರೆಜ್ ಪ್ರಾಪರ್ಟೀಸ್ ಕಾರ್ಯ ನಿರ್ವಾಹಕ ನಿರ್ದೇಶಕ ಫಿರೋಝ್ ಷಾ ಗೋದ್ರೆಜ್ ಉದ್ಘಾಟಿಸಿ ಮಾತನಾಡಿ, ವಿಶ್ವದರ್ಜೆ ಸೌಲಭ್ಯ ಮತ್ತು ಸಮಕಾಲೀನ ವಿನ್ಯಾಸಗಳನ್ನು ಆಲ್ಪೈನ್ ಒಳಗೊಂಡಿದೆ. 4.5 ಎಕರೆ ವಿಶಾಲ ಪ್ರದೇಶದಲ್ಲಿ ತಲಾ 19 ಮಹಡಿಗಳ ತ್ರಿವಳಿ ಗೋಪುರಗಳು ತಲೆ ಎತ್ತಲಿವೆ ಎಂದರು.

ಪ್ರಮುಖ ನಿರ್ಮಾಣ ಸಂಸ್ಥೆ ಎಲ್ ಆ್ಯಂಡ್ ಟಿ ನಿರ್ಮಿಸಲಿರುವ ಆಕರ್ಷಕ ವಿನ್ಯಾಸದ ಮೂರು ಗೋಪುಗಳಲ್ಲಿ 449 ಆಧುನಿಕ ಅಪಾರ್ಟ್‌ಮೆಂಟ್‌ಗಳು ಬರಲಿವೆ. ಗ್ರಾಹಕರು 2, 2.5 ಮತ್ತು 3 ಬೆಡ್‌ರೂಮ್‌ಗಳ ಅಪಾರ್ಟ್‌ಮೆಂಟ್ ಗಳನ್ನು 1,203 ಚದರ ಅಡಿಯಿಂದ 1,695 ಚದರ ಅಡಿಯ ಶ್ರೇಣಿಯಲ್ಲಿ ಪಡೆಯಬಹುದು. ಪೆಂಟ್ ಹೌಸ್ ವಿಸ್ತಾರ 2,700 ಚದರ ಅಡಿಯಿಂದ 3,500 ಚದರ ಅಡಿ ಇರಲಿದೆ.



ಗೋದ್ರೆಜ್ ಆಲ್ಪೈನ್ ವಸತಿ ಸಮುಚ್ಚಯ ನೀಲ ನಕಾಶೆ.

ಗೋದ್ರೆಜ್ ಆಲ್ಪೈನ್ ಅಂತಾರಾಷ್ಟ್ರೀಯ ಗುಣಮಟ್ಟದ ವಿನ್ಯಾಸ, ಸಮಕಾಲೀನ ಸೌಕರ್ಯ ಮತ್ತು ವಿಶ್ವ ವರ್ಗದ ಮನರಂಜನೆ ಸೌಲಭ್ಯಗಳು, ಟೆನ್ನಿಸ್ ಕೋರ್ಟ್, ಬ್ಯಾಡ್ಮಿಂಟನ್ ಕೋರ್ಟ್, ಬಿಲಿಯರ್ಡ್ಸ್ ಕೊಠಡಿ, ಕೇರಂ ಮತ್ತು ಟೇಬಲ್ ಟೆನಿಸ್ ಕೊಠಡಿ ಇತ್ಯಾದಿ ಸೌಲಭ್ಯ ಹೊಂದಿದೆ. ಸುಸಜ್ಜಿತ ಜಿಮ್ನಾಷಿಯಂ, ಹೆಲ್ತ್ ಕ್ಲಬ್ ಮತ್ತು ಈಜುಕೊಳ, ಅತಿಥಿಗಳಿಗೆ ಸರ್ವೀಸ್ಡ್ ಅಪಾರ್ಟ್‌ಮೆಂಟ್, ಕ್ರೆಚೆ, ಬಹುಉದ್ದೇಶದ ಪಾರ್ಟಿ ಹಾಲ್ ಮುಂತಾದ ಸೌಲಭ್ಯ ಒಳಗೊಂಡಿದೆ ಎಂದರು.

ದೇಶದ 12 ಪ್ರಮುಖ ನಗರಗಳಲ್ಲಿ ಗೋದ್ರೆಜ್‌ನಿಂದ ವಸತಿ ಸಮುಚ್ಚಯ ಯೋಜನೆ ನಡೆಸುತ್ತಿದ್ದೇವೆ. ಸಂಸ್ಥೆ ಹಲವಾರು ಪ್ರಶಸ್ತಿ ಮತ್ತು ಮನ್ನಣೆ ಪಡೆದಿದೆ. ಜೀ ಬಿಸಿನೆಸ್ -ಆರ್‌ಐಸಿಎಸ್ ರಿಲಯಲ್ ಎಸ್ಟೇಟ್ ಅವಾರ್ಡ್ಸ್‌ನಲ್ಲಿ ಬೆಸ್ಟ್ ಎಮರ್ಜಿಂಗ್ ನ್ಯಾಶನಲ್ ಡೆವಲಪರ್ ಪ್ರಶಸ್ತಿ ಪಡೆದಿದೆ. ದೇಶದಲ್ಲಿ ಮಂಗಳೂರು ನಗರ ಅತಿ ಶೀಘ್ರ ಅಭಿವೃದ್ಧಿಯಾಗುತ್ತಿದೆ. ಸ್ಥಳೀಯ ಹಾಗೂ ಅನಿವಾಸಿ ಭಾರತೀಯ ಗ್ರಾಹಕರನ್ನು ಗುರಿಯಾಗಿಸಿ ಯೋಜನೆ ನಿರ್ಮಾಣಗೊಳ್ಳುತ್ತಿದೆ ಎಂದು ಫಿರೋಝ್ ಷಾ ಹೇಳಿದರು.

ಫಿಝಾ ಡೆವಲಪರ್ಸ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಪ್ರೈ.ಲಿ.ನ ಆಡಳಿತ ನಿರ್ದೇಶಕ ಬಿ.ಎಂ.ಫಾರೂಖ್ ಮಾತನಾಡಿ, ದೇಶದ ಅತ್ಯುತ್ತಮ ರಿಯಲ್ ಎಸ್ಟೇಟ್ ಸಂಸ್ಥೆ ಗೋದ್ರೆಜ್ ಜತೆ ಒಡಂಬಡಿಕೆ ಮಾಡಿಕೊಳ್ಳಲು ಹೆಮ್ಮೆ ಎನಿಸುತ್ತಿದೆ. ಇದರಿಂದ ಕರಾವಳಿಯ ಮಧ್ಯಮ ವರ್ಗದ ಜನರೂ ಗೋದ್ರೆಜ್ ಕುಟುಂಬದ ಜತೆ ಬಾಂಧವ್ಯ ಇರಿಸುವಂತಾಗಿದೆ ಎಂದರು.

ಗೋದ್ರೆಜ್ ಪ್ರಾಪರ್ಟೀಸ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಕೆ.ಟಿ.ಜಿತೇಂದ್ರನ್, ದಕ್ಷಿಣ ವಲಯ ಉಪಾಧ್ಯಕ್ಷ ಶ್ರೀರಾಮ್ ಅಯ್ಯರ್, ಮಂಗಳೂರು ಯುನೈಟೆಡ್ ಕ್ರಿಕೆಟ್ ಅಕಾಡೆಮಿ ಅಧ್ಯಕ್ಷ ಬಿ.ಎ.ಮೊಹಿಯುದ್ದೀನ್ ಬಾವ ಉಪಸ್ಥಿತರಿದ್ದರು.